ಕರ್ನಾಟಕ ಸರಕಾರ

(ಲೋಕೋಪಯೋಗಿ ಇಲಾಖೆ)

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರ ಕಛೇರಿ
ಲೋಕೋಪಯೋಗಿ ಇಲಾಖೆ ಉಪ-ವಿಭಾಗ
ರಾಯಚೂರು.

ಸಂ: ಸಕಾನಿ:ಲೋಇ:ಉವಿರಾ:ತಾಶಾ:ಕ.ಸು:2024-25/1163 ದಿನಾಂಕ: 20/02/2025

ಮುಖ್ಯೋಪಾಧ್ಯಾಯರು,
ಇಂಟರ್‌ನ್ಯಾಷನಲ್ ದೆಹಲಿ ಪಬ್ಲಿಕ್ ಸ್ಕೂಲ್
ಗದ್ವಾಲ್ ರೋಡ್, ವಡವಟ್ಟಿ ಗ್ರಾಮ
**ತಾ॥ ಜಿ॥ ರಾಯಚೂರು - ಇವರಿಗೆ.**

ಮಾನ್ಯರೇ,

ವಿಷಯ:- ಶಾಲಾ ಕಟ್ಟಡ ಸುರಕ್ಷತೆ ಪ್ರಮಾಣ ಪತ್ರ ನೀಡುವ ಕುರಿತು.

ಉಲ್ಲೇಖ:-1. ಸರ್ಕಾರದ ಅಪರ ಕಾರ್ಯದರ್ಶಿಗಳು ಲೋಕೋಪಯೋಗಿ ಇಲಾಖೆ ಬೆಂಗಳೂರು ರವರ ಪತ್ರ ಸಂ: ಲೋಇ59ಬಿಇಡಿ2019 ದಿ:06-05-2022.
2. ಸರ್ಕಾರದ ಅಪರ ಕಾರ್ಯದರ್ಶಿಗಳು ಲೋಕೋಪಯೋಗಿ ಇಲಾಖೆ ಬೆಂಗಳೂರು ರವರ ಪತ್ರ ಸಂ: ಲೋಇ59ಬಿಇಡಿ2019 ದಿ:25-09-2024.
3. ತಮ್ಮ ಪತ್ರದ ಸ್ವೀಕೃತ ದಿನಾಂಕ: 06-02-2025

* * * * *

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಖಾಸಗಿ ಅನುದಾನಿತ, ಅನುದಾನ ರಹಿತ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಪಟ್ಟ ಕಟ್ಟಡಗಳಿಗೆ ಸ್ಟ್ರಕ್ಚರಲ್ ಸ್ಟೆಬಿಲಿಟಿ ನಿರಾಪೇಕ್ಷಣಾ ಪ್ರಮಾಣ ಪತ್ರವನ್ನು ನೀಡಲು ಉಲ್ಲೇಖ (1) ಮತ್ತು (2)ರನ್ವಯ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿದಂತೆ.

ಉಲ್ಲೇಖ ಪತ್ರ (3)ರಲ್ಲಿ ತಾವು, ಇಂಟರ್‌ನ್ಯಾಷನಲ್ ದೆಹಲಿ ಪಬ್ಲಿಕ್ ಸ್ಕೂಲ್ ಗದ್ವಾಲ್ ರೋಡ್, ವಡವಟ್ಟಿ ಗ್ರಾಮ ತಾ॥ ಜಿ॥ ರಾಯಚೂರು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ಕೋರಿರುತ್ತಾರೆ.

ಕಾರಣ ಈ ಉಪ-ವಿಭಾಗ ಶಾಖಾಧಿಕಾರಿಗಳು ದಿನಾಂಕ:18-02-2025ರಂದು ಸಂಬಂಧಪಟ್ಟ ಶಾಲೆಯ ಮುಖ್ಯಸ್ಥರೊಂದಿಗೆ ಕಟ್ಟಡದ ಜಂಟಿ ಪರಿವೀಕ್ಷಣೆ ಕೈಗೊಂಡು, ಸದರಿ ಶಾಲಾ ಕಟ್ಟಡವು ನೆಲ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿ ಕಟ್ಟಡವಾಗಿರುತ್ತದೆ. ಕಟ್ಟಡವು ಆರ್.ಸಿ.ಸಿ. ಛಾವಣಿಯ ಕಟ್ಟಡವಾಗಿರುತ್ತದೆ. ಕಟ್ಟಡ ಇಟ್ಟಿಗೆ ಗೋಡೆಗಳಿಂದ ನಿರ್ಮಿಸಲಾಗಿದ್ದು, ಕಾಲಂಗಳಿಂದ, ಸ್ಟೇರ್‌ಕೇಸ್, ಬಾಗಿಲು, ಕಿಟಕಿ ಮತ್ತು ವೆಂಟಿಲೇಟರ್‌ಗಳಿಂದ ಕೂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಮುಂದವರೆದು ಉಲ್ಲೇಖ ಪತ್ರ (3)ರೊಂದಿಗೆ ಲಗತ್ತಿಸಿದ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ್ ಬಾಯಿದೊಡ್ಡಿ ಇವರ ಕಟ್ಟಡ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ಹಾಗೂ ಎಸ್.ಬಿ.ಸಿ. ವರದಿ, ಸ್ಟ್ರಕ್ಚರಲ್ ಡಿಸೈನ್ ಹಾಗೂ ನಕಾಶೆಗಳ ಪ್ರಕಾರ ಕಟ್ಟಡವು ಸದೃಢವಾಗಿರುತ್ತವೆ. ದಾಖಲಾತಿಗಳ ಪ್ರಕಾರ ಕಟ್ಟಡ ನಿರ್ಮಾಣಗೊಂಡು 1 ವರ್ಷವಾಗಿರುತ್ತದೆ. ನೆಲ, ಮೊದಲನೇ ಮತ್ತು ಎರಡನೇ ಮಹಡಿಯ ಕಟ್ಟಡಗಳು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಉಪಯೋಗಕ್ಕೆ ಸೂಕ್ತವಾಗಿರುತ್ತದೆ ಹಾಗೂ ಕಟ್ಟಡಕ್ಕೆ ಕಾಲಕಾಲಕ್ಕೆ ನಿರಂತರವಾಗಿ ನಿರ್ವಹಣೆ ಅತೀವಶ್ಯಕವಾಗಿರುತ್ತದೆ ಎಂಬ ಷರತ್ತಿನೊಂದಿಗೆ ಪ್ರಸ್ತುತ ಭೌತಿಕವಾಗಿ ಸುಭದ್ರವಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ.

ಆದಕಾರಣ ಶಾಲಾ ಕಟ್ಟಡದ ಸುರಕ್ಷತೆಯನ್ನು ದೃಢೀಕರಿಸಿದೆ ಹಾಗೂ ಕಟ್ಟಡವು ಗ್ರಾಮೀಣ ಪ್ರದೇಶದಲ್ಲಿರುವ ಪ್ರಯುಕ್ತ ಉಲ್ಲೇಖ ಪತ್ರ (1)ರನ್ವಯ ರೂ.1,000/- ಮೊತ್ತದ ಶುಲ್ಕವು ಡಿ.ಡಿ ಸಂ:589482 ದಿನಾಂಕ: 19-02-2025 ರಂದು ಮುಖಾಂತರ ವಿಭಾಗ ಕಛೇರಿಗೆ ಜಮಾವತಿ ಮಾಡಲಾಗಿರುತ್ತದೆ.

ಪು.ತಿ.ನೋ...

MANAGER
International Delhi Public School
At and Post Wadwatti, Gadwal Road,
RAICHUR-584102 (KA)

PRINCIPAL
International Delhi Public School
At and Post Wadwatti, Gadwal Road,
RAICHUR-584102 (KA)

ಉಲ್ಲೇಖ ಪತ್ರ (2)ರನ್ವಯ ಕಟ್ಟಡದ ಜೀವಿತಾವಧಿಯು 15 ವರ್ಷಗಳಿಗಿಂತ ಕಡಿಮೆ ಇರುವ ಪ್ರಯುಕ್ತ ಈ ದೃಡೀಕರಣ ಪತ್ರವು 10 ವರ್ಷಗಳ ಅವಧಿಗೆ ಮಾತ್ರ ಸಿಂಧುವಾಗಿರುತ್ತದೆ.

ಲಗತ್ತು: ಪರಿವೀಕ್ಷಣೆಯ ಛಾಯಾಚಿತ್ರಗಳು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು
ಲೋಕೋಪಯೋಗಿ ಇಲಾಖೆ, ಉಪ-ವಿಭಾಗ
ರಾಯಚೂರು.

1. ಪ್ರತಿಯನ್ನು ಮಾನ್ಯ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ರಾಯಚೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ರಾಯಚೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

MANAGER
International Delhi Public School
At and Post Wadwatti, Gadwal Road,
RAICHUR-584102 (KA)

PRINCIPAL
International Delhi Public School
At and Post Wadwatti, Gadwal Road,
RAICHUR-584102 (KA)